ಸಿ.ಸಿ. 28/2015
ಪಿ.ಡಬ್ಲ್ಯು-01

**ಸಾಕ್ಷಿಯನ್ನು ದಿನಾಂಕಃ 04.03.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರ ಶ್ರೀ. ಪಿ.ಎಸ್. ವಕೀಲರಿಂದಃ**

ನನ್ನ ಮಾವ ನನ್ನ ತಲೆ ಕೂದಲನ್ನು ಹಿಡಿದು ಎಳೆದಾಡಿ, ಬೆನ್ನಿಗೆ ಹೊಡೆದು, ಮನೆಯಲ್ಲಿದ್ದ ಖರ್ಚಿಯನ್ನು ತಳ್ಳಾಡಿ ಕೀಗಳು ಎಲ್ಲಿ ಎಂದು ಕೇಳಿರುತ್ತಾರೆ. ಅದಕ್ಕೆ ನಾನು ಕೊಡುವುದಿಲ್ಲ ಎಂದು ಹೇಳಿರುತ್ತೇನೆ. ಆಗ ಕೀ ಗೋಡೆಯಲ್ಲಿರುವುದನ್ನು ನೋಡಿ ಉಳಿದವರು ಕೀಯನ್ನು ತೆಗೆದುಕೊಂಡು ಹೋಗಿರುತ್ತಾರೆ. ಈ ವಿಚಾರವನ್ನು ಯಾರಿಗಾದರು ಹೇಳಿದರೆ ನನ್ನನ್ನು ಕೊಲೆ ಮಾಡುತ್ತೇನೆಂದು ಹೆದರಿಸಿರುತ್ತಾರೆ. ಆಗ ನಾನು ಸುಮ್ಮನಿರುತ್ತೇನೆ. ನಂತರ ಕೀಗಳನ್ನು ತೆಗೆದುಕೊಂಡು ಟಾಟಾ ವಿಂಗರ್, ಟ್ರಾಲಿಯನ್ನೊಳಗೊಂಡ ಟ್ರಾಕ್ಟರ್ ಮತ್ತು 02 ಸ್ಕೂಟರ್ ಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಟಾಟಾ ವಿಂಗರ್ ನ ನಂಬರ್ ಕೆಎ45 6717, ಟ್ರಾಕ್ಟರ್ ನಂಬರ್ ಕೆಎ45 ಟಿ652, ಟ್ರಾಲಿಯ ನಂಬರ್ ಕೆಎ 45 ಟಿ 652, ಹೀರೋ ಹೋಂಡಾ ಪ್ಯಾಶನ್ ಪ್ಲಸ್ ಬೈಕ್ ನಂಬರ್ ಕೆಎ45 ಇ7054 ಮತ್ತು ಹೀರೋ ಹೋಂಡಾ ಪ್ಯಾಶನ್ ಪ್ರೋ ಕೆಎ45 ಎಲ್ 2635 ಆಗಿರುತ್ತದೆ. ನಂತರ ನಾನು ನನ್ನ ತಂದೆಗೆ ಫೋನ್ ಮೂಲಕ ಗಲಾಟೆಯಾದ ವಿಷಯವನ್ನು ಮತ್ತು ವಾಹನಗಳನ್ನು ತೆಗೆದುಕೊಂಡು ಹೋದ ವಿಷಯವನ್ನು ತಿಳಿಸಿರುತ್ತೇನೆ. ಮರುದಿವಸ ನನ್ನ ತಂದೆ, ನನ್ನ ಚಿಕ್ಕಪ್ಪನಾದ ಮಂಗಳಪ್ಪ, ದಡದಹಳ್ಳಿ ಗ್ರಾಮದ ನಂಜುಂಡಸ್ವಾಮಿ ಮತ್ತು ಗುರುಸ್ವಾಮಿಯವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿರುತ್ತಾರೆ. ದಿನಾಂಕಃ 11.03.2014 ರಂದು ನಾನು ನನ್ನ ತಂದೆಯ ಜೊತೆ ಬಂದಿದ್ದ ಎಲ್ಲರನ್ನು ಕರೆದುಕೊಂಡು ಚಿಕ್ಕಕೆರೆಯೂರು ಗ್ರಾಮಕ್ಕೆ ನಮ್ಮ ಮಾವನ ಮನೆಗೆ ಕರೆದುಕೊಂಡು ಹೋಗಿರುತ್ತೇನೆ. ಅಲ್ಲಿ ಮಾತುಕತೆ ನಡೆದು ಆರೋಪಿಗಳು ತಾವು ಮಾಡಿದ್ದು ತಪ್ಪಾಗಿರುತ್ತದೆ, ವಾಹನಗಳನ್ನು ವಾಪಸ್ ತಂದು ಕೊಡುತ್ತೇವೆ ಎಂದು 01 ತಿಂಗಳ ಸಮಯ ಕೇಳಿದ್ದರಿಂದ ನಾನು

ವಾಪಸ್ ಬಂದಿರುತ್ತೇನೆ. 01 ತಿಂಗಳಾದರು ಯಾವುದೇ ವಾಹನಗಳನ್ನು ತಂದು ಕೊಟ್ಟಿರುವುದಿಲ್ಲ. ಪುನಃ ನಾನು ದಿನಾಂಕಃ 28.04.2014 ರಂದು ಚಿಕ್ಕಕೆರೆಯೂರು ಗ್ರಾಮದ ನಮ್ಮ ಮಾವನ ಮನೆಗೆ ಹೋದಾಗ ನನ್ನ ಮಾವ ನನ್ನ ತಲೆಯ ಜುಟ್ಟನ್ನು ಹಿಡಿದು ಎಳೆದಾಡಿ ನನ್ನನ್ನು ಕೆಳಗಡೆ ಬೀಳಿಸಿರುತ್ತಾರೆ, ನನ್ನ ಭಾವ ಸ್ವಾಮಿ ಗಾಡಿ ಗೂಟ ತೆಗೆದುಕೊಂಡು ಬಂದು ನನ್ನ ತಲೆಗೆ ಹೊಡೆಯಲು ಬಂದಿರುತ್ತಾರೆ ಮತ್ತು ಉಳಿದ ಆರೋಪಿಗಳು ನನ್ನನ್ನು ಕೊಲೆ ಮಾಡುತ್ತೇವೆಂದು ಬೆದರಿಕೆ ಹಾಕಿರುತ್ತಾರೆ. ಆಗ ನನ್ನ ತಂದೆಯ ಜೊತೆ ಬಂದಿದ್ದ ನನ್ನ ಚಿಕ್ಕಪ್ಪ ಮಂಗಳಪ್ಪ, ಗುರುಸ್ವಾಮಿ ಮತ್ತು ನಂಜುಂಡಸ್ವಾಮಿ ಗಲಾಟೆಯನ್ನು ಬಿಡಿಸಿ ನನ್ನನ್ನು ವಾಪಸ್ ಮನೆಗೆ ಕರೆದುಕೊಂಡು ಬಂದಿರುತ್ತಾರೆ.

ದಿನಾಂಕಃ 29.04.2014 ರಂದು ನಾನು ಹೆಚ್.ಡಿ. ಕೋಟೆ ಪೋಲೀಸ್ ಠಾಣೆಗೆ ಹೋಗಿ ದುರು ಕೊಡಲು ಹೋದಾಗ ಅವರು ದೂರನ್ನು ಸ್ವೀಕರಿಸಿರುವುದಿಲ್ಲ. ದಿನಾಂಕಃ 30.04.2014 ರಂದು ಹುಣಸೂರು ಉಪ ಸಹಾಯಕ ಅಧೀಕ್ಷಕರವರಿಗೆ ದೂರು ನೀಡಿರುತ್ತೇನೆ. ನಂತರ ಅವರು ನನ್ನ ದೂರನ್ನು ಪರಿಶೀಲಿಸಿ ವರದಿ ನೀಡುವಂತೆ ಹೆಚ್.ಡಿ. ಕೋಟೆ ಪೋಲೀಸ್ ಠಾಣೆಗೆ ನಿರ್ದೇಶನ ನೀಡಿರುತ್ತಾರೆ. ಆದರೆ ಹೆಚ್.ಡಿ. ಕೋಟೆ ಪೋಲೀಸ್ ಠಾಣೆಯವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ಈ ಖಾಸಗಿ ದೂರು ಸಲ್ಲಿಸಿರುತ್ತೇನೆ.

ನಾನು ಹುಣಸೂರು ಉಪ ಅಧೀಕ್ಷಕರಿಗೆ ನೀಡಿದ ದೂರಿನ ಪ್ರತಿಯನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಸದರಿ ದೂರನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿ.ಪಿ.-1 ಎಂದು ಗುರುತಿಸಲಾಯಿತು. ನಾನು ಟ್ರಾಕ್ಟರ್, ಹೀರೋ ಹೋಂಡಾ ಮೋಟಾರ್ ಸೈಕಲ್, ವಿಂಗರ್ ಮತ್ತು ಹೀರೋ ಹೋಂಡಾ ಪ್ಯಾಶನ್ ಪ್ರೋಗೆ ಸಂಬಂಧಿಸಿದ ಬಿ ರಿಜಿಸ್ಟರ್ ಎಕ್ಸಟ್ರಾಕ್ಟ್ಸ್ ಮತ್ತು ಆರ್.ಸಿ. ಕಾರ್ಡ್ ಪ್ರತಿಯನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಸದರಿ ದಾಖಲೆಗಳನ್ನು

ನೋಡಿ ಗುರುತಿಸಿದ್ದರಿಂದ, 03 ಬಿ ರಿಜಿಸ್ಟರ್ ಎಕ್ಸಟ್ರಾಕ್ಟ್ಸ್ ಗಳನ್ನು ಕ್ರಮವಾಗಿ ನಿ.ಪಿ.-2 ರಿಂದ ನಿ.ಪಿ.-4 ಎಂದು ಮತ್ತು ಅರ್.ಸಿ. ಕಾರ್ಡ್ ನ ಪ್ರತಿಯನ್ನು ನಿ.ಪಿ.-5 ಎಂದು ಗುರುತಿಸಲಾಯಿತು. ನನ್ನ ಗಂಡನ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಸಾಕ್ಷಿಯು ಸದರಿ ಮರಣ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿ.ಪಿ.-6 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ. ಕೆ.ಸಿ.ಎಸ್. ವಕೀಲರಿಂದಃ</u>**

ಮಾನ್ಯ ಶ್ರೀ. ಕೆ.ಸಿ.ಎಸ್. ವಕೀಲರು ಈ ಹಂತದಲ್ಲಿ ಫ್ರಾಸಾ-1 ರವರ ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**